ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಈ ಬಗ್ಗೆ ಸೂಕ್ತ ತಿದ್ದುಪಡಿಯನ್ನು ಲೋಕೋಪಯೋಗಿ ಇಲಾಖೆಯು ದಿನಾಂಕ 13-3-98 ರಂದು ಹೊರಡಿಸಿದೆ.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ಸುರತ್ಕಲ್ ಕ್ಷೇತ್ರದ ಕಾಡಿಪಾಳ್ಯದ ಅಂಬೇಡ್ಕರ್ ಯೋಜನೆಯ ಮನೆಗಳು

617 - ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್ಲು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ಲು ಕ್ಷೇತ್ರದ ಕಾಟಿಪಾಳ್ಯದಲ್ಲಿ ಅಂಬೇಡ್ಕರ್ ಯೋಜನೆಯಡಿ ನಿರ್ಮಿತವಾದ ಮನೆಗಳಲ್ಲಿ ಆದ ಅವ್ಯವಹಾರ ಸರಕಾರದ ಗಮನಕ್ಕೆ ಬಂದಿದೆಯೇ? ಆ ಮನೆಗಳ ಮಂಜೂರಾತಿ ಯಾವ ವರ್ಷದಲ್ಲಾಯಿತು?

ಆ) ಫಲಾನುಭವಿಗಳಿಗೆ ಆದ ವಂಚನೆಯಲ್ಲಿ ಪಾಲುಗೊಂಡವರನ್ನು ಗುರುತಿಸಲಾಗಿದೆಯೇ ಹಾಗಿದ್ದಲ್ಲಿ ಅವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಇ) ಫಲಾನುಭವಿಗಳಿಗೆ ಮನೆಗಳನ್ನು ಒದಗಿಸಿಕೊಡುವ ಕಾರ್ಯ ಪೂರ್ಣಗೊಳಿಸಲಾಗಿದೆಯೇ? ಎಷ್ಟು ಮನೆಗಳು ಇನ್ನೂ ಬಾಕಿ ಇವೆ?

ಈ) ಯಾವಾಗ ಯಾವ ಮೂಲದಿಂದ ಆ ಮನೆಗಳನ್ನು ಪೂರ್ಣಗೊಳಿಸಿ ಒದಗಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಸುರತ್ಕಲ್ ಕ್ಷೇತ್ರದ ಕಾಟಪಾಳ್ಯದಲ್ಲಿ ಅಂಬೇಡ್ಕರ್ ಯೋಜನೆಯಡಿ ನಿರ್ಮಿತವಾದ ಮನೆಗಳಲ್ಲಿ ಆಗಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆ. 1993-94ನೇ ಸಾಲಿನಲ್ಲಿ ಅಂಬೇಡ್ಕರ್ ಯೋಜನೆಯ 37 ಮನೆಗಳನ್ನು ಮಂಜೂರು ಮಾಡಲಾಗಿದೆ.

ಆ) ಈ ಅವ್ಯವಹಾರದಲ್ಲಿ ಪಾಲುಗೊಂಡವರನ್ನು ಗುರ್ತಿಸಲಾಗಿದೆ. ಒಬ್ಬ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಇಬ್ಬರು ಕಾರ್ಯದರ್ಶಿಗಳು ಹಾಗೂ ಇಬ್ಬರು ಕಿರಿಯ ಇಂಜಿನಿಯರ್‌ಗಳು ಈ ಅವ್ಯವಹಾರಕ್ಕೆ ಒಳಗೊಂಡಿರುತ್ತಾರೆ ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 119 ವಿಸೇಟಿ 96 ದಿನಾಂಕ : 11-7-97ರಂತೆ ಇಲಾಖಾವಿಚಾರಣೆ ಪ್ರಾರಂಭವಾಗಿದೆ.

ಇ) ಫಲಾನುಭವಿಗಳಿಗೆ ಮನೆಗಳನ್ನು ಒದಗಿಸಿಕೊಡುವ ಕಾರ್ಯ ಪ್ರಗತಿಯಲ್ಲಿದೆ. ಒಂದು ತಿಂಗಳೊಳಗೆ ಮನೆಗಳನ್ನು ಫಲಾನುಭವಿಗಳಿಂದ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲು ನಿರ್ದೇಶನವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಲಾಗಿದೆ.

ಈ) 1997-98ನೇ ಸಾಲಿನಲ್ಲಿ ಅಂಬೇಡ್ಕರ್ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನದಿಂದ ಸದರಿ ಮನೆಗಳನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ಒದಗಿಸಲಾಗುವುದು.

ಆರಾಧನಾ ಯೋಜನೆಯಡಿಯಲ್ಲಿ ಹಣ ಬಿಡುಗಡೆ

618 - ಡಾ।। ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96, 1996-97, 1997-98ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಬಿಡುಗಡೆ ಮಾಡಲಾದ ಹಣ ಎಷ್ಟು?*

ಆ) *ಖರ್ಚಾಗಿರುವ ಹಣ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)?*

ಶ್ರೀ ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ)

ವರ್ಷ	*ಬಿಡುಗಡೆಯಾದ ಹಣ ರೂ. ಗಳಲ್ಲಿ*
1995-96	4.50 ಕೋಟಿ
1996-97	5.00 ಕೋಟಿ
1997-98	5.00 ಕೋಟಿ (ಬಿಡುಗಡೆಯಾಗುವ ಹಂತದಲ್ಲಿದೆ.)

ಆ) 1991-92 ರಿಂದ 1996-97ನೇ ಸಾಲಿನವರೆಗೆ ಒಟ್ಟು ರೂ. 18,43,71, 662-00 ಗಳನ್ನು ಖರ್ಚು ಮಾಡಲಾಗಿದೆ (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ).